## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೆ.ಎಲ್.ಇ ಸೊಸೈಟಿಯ ಕಾಲೇಜ್ ಆಫ್ ಫಾರ್ಮಸಿ, ನಿಪ್ಪಾಣಿ, ಬೆಳಗಾವಿ ಇವರಿಗೆ 2022-23ನೇ ಶೈಕ್ಷಣಿಕ ಸಾಲಿಗೆ ಬಿ-ಫಾರ್ಮಸಿ ಕೋರ್ಸ್‌ನ ಪ್ರವೇಶ ಮಿತಿಯನ್ನು ಹೆಚ್ಚಿಸಲು ಹಾಗೂ ಹೊಸದಾಗಿ ಎಂ-ಫಾರ್ಮ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಆಕುಕ 81 ಪಿಟಿಡಿ 2002, ದಿನಾಂಕ:29.8.2002
2. ಸರ್ಕಾರದ ಆದೇಶ ಸಂಖ್ಯೆ: ಆಕುಕ 338 ಪಿಟಿಡಿ 2005, ದಿನಾಂಕ:07.9.2006
3. ನಿಬಂಧಕರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ಮಹಾವಿದ್ಯಾಲಯ ಇವರ ವರದಿ ಸಂಖ್ಯೆ: ACA/AFF/F/PH-54/2022-23, ದಿನಾಂಕ: 07.09.2022.
4. ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಬೆಂಗಳೂರು ಇವರ ವರದಿ ಸಂಖ್ಯೆ:ಔನಿಇ/69/ಯೋಜನೆ/2022-23, ದಿನಾಂಕ:17.11.2022.
5. ಉನ್ನತಾಧಿಕಾರಿ ಸಮಿತಿ ಸಭೆ ದಿನಾಂಕ:21.11.2022ರ ಸಭಾ ನಡವಳಿಗಳು

********

**ಪ್ರಸ್ತಾವನೆ**

ಮೇಲೆ ಓದಲಾದ ಕ್ರ.ಸಂ (1)ರ ಸರ್ಕಾರದ ಆದೇಶದಲ್ಲಿ ಕೆಎಲ್ಇ ಸೊಸೈಟಿಯ ಕಾಲೇಜ್ ಆಫ್ ಫಾರ್ಮಸಿ ನಿಪ್ಪಾಣಿ ಸಂಸ್ಥೆಗೆ 2002-2003ನೇ ಸಾಲಿನಿಂದ ಹೊಸದಾಗಿ 40 ವಿದ್ಯಾರ್ಥಿಗಳ ಪ್ರವೇಶ ಮಿತಿಯೊಂದಿಗೆ ಬಿ-ಫಾರ್ಮಸಿ ಕೋರ್ಸ್ ಪ್ರಾರಂಭಿಸಲು ಸರ್ಕಾರದ ಅನುಮತಿ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ (2)ರ ಸರ್ಕಾರದ ಆದೇಶದಲ್ಲಿ ಕೆಎಲ್ಇ ಸೊಸೈಟಿಯ ಕಾಲೇಜ್ ಆಫ್ ಫಾರ್ಮಸಿ ನಿಪ್ಪಾಣಿ ಸಂಸ್ಥೆಗೆ 2005-2006 ಶೈಕ್ಷಣಿಕ ಸಾಲಿನಿಂದ ಬಿ-ಫಾರ್ಮಸಿ ಕೋರ್ಸ್‌ನ ಪ್ರವೇಶಮಿತಿಯನ್ನು 40 ರಿಂದ 60ಕ್ಕೆ ಹೆಚ್ಚಿಸಲು ಸರ್ಕಾರದ ಅನುಮತಿ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ.(3)ರ ವರದಿಯಲ್ಲಿ ನಿಬಂಧಕರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ಮಹಾವಿದ್ಯಾಲಯ ಇವರು ಕೆ.ಎಲ್.ಇ ಸೊಸೈಟಿಯ ಕಾಲೇಜ್ ಆಫ್ ಫಾರ್ಮಸಿ, ನಿಪ್ಪಾಣಿ, ಬೆಳಗಾವಿ ಇವರಿಗೆ 2022-23ನೇ ಸಾಲಿಗೆ ಬಿ-ಫಾರ್ಮಸಿ ಕೋರ್ಸ್ ಪ್ರವೇಶ ಮಿತಿಯನ್ನು 60 ರಿಂದ 100ಕ್ಕೆ ಹೆಚ್ಚಿಸಲು ಹಾಗೂ ಹೊಸದಾಗಿ ಎಂ-ಫಾರ್ಮ ಕೋರ್ಸ್‌ಫಾರ್ಮಸ್ಯೂಟಿಕಲ್ ಕೆಮಿಸ್ಟ್ರೀ ವಿಭಾಗವನ್ನು 10 ಸೀಟುಗಳ ಪ್ರವೇಶ ಮಿತಿಯೊಂದಿಗೆ ಪ್ರಾರಂಭಿಸಲು ಶಿಫಾರಸ್ಸು ಮಾಡಿರುತ್ತಾರೆ.

SRG

...2

KLE Society's
College of Pharmacy Nipani
Inward No. 182/2022-23
Date. 17/02/2023

ಔಷಧ ನಿಯಂತ್ರಕರು, ಮೇಲೆ ಓದಲಾದ ಕ್ರ.ಸಂ.(4)ರ ವರದಿಯಲ್ಲಿ 2022-23ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಬಿ-ಫಾರ್ಮಸಿ ಕೋರ್ಸ್‌ನ ಪ್ರವೇಶ ಮಿತಿಯನ್ನು 60 ರಿಂದ 100ಕ್ಕೆ ಹೆಚ್ಚಿಸಲು ಮತ್ತು ಎಂ-ಫಾರ್ಮ ಕೋರ್ಸ್ (ಫಾರ್ಮಸ್ಯೂಟಿಕಲ್ ಕೆಮಿಸ್ಟ್ರಿ) ವಿಭಾಗವನ್ನು ಪ್ರಾರಂಭಿಸುವ ಮೊದಲು PCI ಇವರಿಂದ ಅನುಮತಿ ಪಡೆಯಬೇಕೆಂಬ ಷರತ್ತಿನೊಂದಿಗೆ ಹಾಗೂ ಎಂ-ಫಾರ್ಮ ಕೋರ್ಸ್ (ಫಾರ್ಮಸ್ಯೂಟಿಕಲ್ ಕೆಮಿಸ್ಟ್ರಿ) ವಿಭಾಗದಲ್ಲಿ ಸ್ನಾತಕೋತ್ತರ ಸಂಶೋಧನಾ ಮಾರ್ಗದರ್ಶಕರಾಗಲು ಅರ್ಹವಿರುವ ಬೋಧನಾ ಸಿಬ್ಬಂದಿ ಒಂದು ಮಾತ್ರ ಆಗಿರುವುದರಿಂದ 05 ಸೀಟುಗಳ ಪ್ರವೇಶಮಿತಿಯೊಂದಿಗೆ ಪ್ರಾರಂಭಿಸಲು ಅನುಮತಿ ನೀಡಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ.(5)ರ ದಿನಾಂಕ:21.11.2022ರಂದು ನಡೆದ ಉನ್ನತಾಧಿಕಾರಿ ಸಮಿತಿ ಸಭೆಯಲ್ಲಿ ಕೆಎಲ್ಇ ಕಾಲೇಜ್ ಆಫ್ ಫಾರ್ಮಸಿ ನಿಪ್ಪಾಣಿ, ಬೆಳಗಾವಿ ಇವರಿಗೆ 2022-2023ನೇ ಸಾಲಿನಿಂದ ಬಿ-ಫಾರ್ಮಸಿ ಕೋರ್ಸಿನ ಪ್ರವೇಶಮಿತಿಯನ್ನು 60-100ಕ್ಕೆ ಹೆಚ್ಚಿಸಲು ಹಾಗೂ ಹೊಸದಾಗಿ ಎಂ-ಫಾರ್ಮ ಕೋರ್ಸ್ (ಫಾರ್ಮಸ್ಯೂಟಿಕಲ್ ಕೆಮಿಸ್ಟ್ರಿ) ವಿಭಾಗವನ್ನು 05 ಸೀಟುಗಳ ಪ್ರವೇಶಮಿತಿಯೊಂದಿಗೆ ಪ್ರಾರಂಭಿಸಲು PCI ಅನುಮತಿ ಪಡೆಯುವ ಷರತ್ತಿಗೊಳಪಟ್ಟು ನಿರಾಕ್ಷೇಪಣಾ ಪತ್ರ ನೀಡಲು ಶಿಫಾರಸ್ಸು ಮಾಡಲಾಯಿತು.

ಔಷಧ ನಿಯಂತ್ರಕರು ಹಾಗೂ ನಿಬಂಧಕರು, RGUHS ಇವರ ವರದಿಗಳು ಮತ್ತು ಲಭ್ಯವಿರುವ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು, ಕೆ.ಎಲ್.ಇ ಸೊಸೈಟಿಯ ಕಾಲೇಜ್ ಆಫ್ ಫಾರ್ಮಸಿ, ನಿಪ್ಪಾಣಿ, ಬೆಳಗಾವಿ ಇವರಿಗೆ 2022-23ನೇ ಸಾಲಿಗೆ ಬಿ-ಫಾರ್ಮಸಿ ಕೋರ್ಸ್ ಪ್ರವೇಶ ಮಿತಿಯನ್ನು 60 ರಿಂದ 100ಕ್ಕೆ ಹೆಚ್ಚಿಸಲು ಹಾಗೂ ಹೊಸದಾಗಿ ಎಂ-ಫಾರ್ಮ ಕೋರ್ಸ್ (ಫಾರ್ಮಸ್ಯೂಟಿಕಲ್ ಕೆಮಿಸ್ಟ್ರಿ) ವಿಭಾಗವನ್ನು 05 ಸೀಟುಗಳ ಪ್ರವೇಶ ಮಿತಿಯೊಂದಿಗೆ ಪ್ರಾರಂಭಿಸಲು PCI ಇವರಿಂದ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು ನಿರಾಕ್ಷೇಪಣಾ ಪತ್ರ ನೀಡಲು ಸರ್ಕಾರವು ನಿರ್ಧರಿಸಿದೆ. ಅದರಂತೆ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಆಕುಕ 140 ಐಎಂಎಂ 2022,**
**ಬೆಂಗಳೂರು, ದಿನಾಂಕ: 07.02.2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೆ.ಎಲ್.ಇ ಕಾಲೇಜ್ ಆಫ್ ಫಾರ್ಮಸಿ, ಅಕ್ಕೋಳ್ ರಸ್ತೆ, ನಿಪ್ಪಾಣಿ, ಬೆಳಗಾವಿ-591237 ಇವರಿಗೆ 2022-23ನೇ ಶೈಕ್ಷಣಿಕ ಸಾಲಿಗೆ ಬಿ-ಫಾರ್ಮಸಿ ಕೋರ್ಸ್‌ನ ಪ್ರವೇಶ ಮಿತಿಯನ್ನು 60 ರಿಂದ 100ಕ್ಕೆ ಹೆಚ್ಚಿಸಲು ಹಾಗೂ ಹೊಸದಾಗಿ ಎಂ-ಫಾರ್ಮ ಕೋರ್ಸ್ (ಫಾರ್ಮಸ್ಯೂಟಿಕಲ್ ಕೆಮಿಸ್ಟ್ರಿ) ವಿಭಾಗವನ್ನು 05 ಸೀಟುಗಳ ಪ್ರವೇಶ ಮಿತಿಯೊಂದಿಗೆ ಪ್ರಾರಂಭಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ನಿರಾಕ್ಷೇಪಣಾ ಪತ್ರ ನೀಡಲಾಗಿದೆ.

1. ಬಿ-ಫಾರ್ಮ ಕೋರ್ಸ್‌ನ ಸೀಟುಗಳನ್ನು ಹೆಚ್ಚಿಸುವ ಮುನ್ನ ಅಗತ್ಯವಿರುವ ಎಲ್ಲಾ ಮೂಲಭೂತ ಸೌಲಭ್ಯಗಳು ಹಾಗೂ ಸಿಬ್ಬಂದಿಯನ್ನು ಹೊಂದಿರತಕ್ಕದ್ದು.
2. ಎಂ-ಫಾರ್ಮ ಕೋರ್ಸ್ ಪ್ರಾರಂಭಿಸುವ ಮುನ್ನ PCI ನಿಂದ ಅನುಮೋದನೆ ಪಡೆಯತಕ್ಕದ್ದು.

SRG

3. ಸರ್ಕಾರದ ಸೀಟುಗಳ ಹಂಚಿಕೆಯಲ್ಲಿ ಪ್ರವೇಶಕ್ಕೆ ಹಾಲಿ ಜಾರಿಯಲ್ಲಿರುವ ನಿಯಮ/ಆದೇಶಗಳಿಗೆ ಸಂಸ್ಥೆಯು ಬದ್ಧವಾಗಿರಬೇಕು ಮತ್ತು ಸರ್ಕಾರಿ ಕೋಟಾ ಸೀಟುಗಳನ್ನು ಬಿಟ್ಟುಕೊಡತಕ್ಕದ್ದು.

4. RGUHS ಮತ್ತು PCI ನಿಗದಿಪಡಿಸಿರುವ ಪರಿನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

5. ರಾಜ್ಯ/ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನೀಡುವ ಸೂಚನೆ ಹಾಗೂ ಆದೇಶಗಳನ್ನು ಪಾಲಿಸತಕ್ಕದ್ದು.

6. ಈ ಕಾಲೇಜಿಗೆ ಕರ್ನಾಟಕ ಸರ್ಕಾರದ ವತಿಯಿಂದ ಯಾವುದೇ ರೀತಿಯ ಅನುದಾನ, ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದಿಲ್ಲ. ಇದು ಶಾಶ್ವತ ಅನುದಾನ ರಹಿತ ಷರತ್ತಿಗೆ ಒಳಪಟ್ಟಿರುತ್ತದೆ.

7. ಸರ್ಕಾರ/ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ, ಯಾವುದೇ ಕಾರಣಕ್ಕೂ ಕಾಲೇಜಿನ ಹೆಸರು ಮತ್ತು ವಿಳಾಸವನ್ನು ಬದಲಾಯಿಸುವಂತಿಲ್ಲ.

8. ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸುವ ಕೋರ್ಸ್‌ನ ಶುಲ್ಕಗಳನ್ನು ಮಾತ್ರ ವಿದ್ಯಾರ್ಥಿಗಳಿಂದ ಪಡೆಯತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರದಿಂದ ಮಂಜೂರಾದ ಸೀಟುಗಳಲ್ಲಿ ಕಾಲಕಾಲಕ್ಕೆ ಸರ್ಕಾರವು ನಿಗದಿಪಡಿಸುವ ಅನುಪಾತದಲ್ಲಿ ಸರ್ಕಾರಕ್ಕೆ ಸೀಟುಗಳನ್ನು ಬಿಟ್ಟುಕೊಡತಕ್ಕದ್ದು.

9. ಸಂಸ್ಥೆಯ ಆರ್ಥಿಕ ಸ್ಥಿತಿಯನ್ನು ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಇವರು ಖಚಿತಪಡಿಸಿಕೊಳ್ಳುವುದು.

10. ಸರ್ಕಾರ ವಿಧಿಸಿರುವ ಮೇಲ್ಕಂಡ ಯಾವುದೇ ಒಂದು ಷರತ್ತನ್ನು ಉಲ್ಲಂಘಿಸಿದಲ್ಲಿ ಸಂಯೋಜನೆ/ಮಂಜೂರಾತಿಯನ್ನು ಹಿಂತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

SR Gorawar
7/2/23

**(ಶೈಲಾ ಆರ್. ಗೊರವರ)**
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾವೈಪ ಮತ್ತು ಸಮನ್ವಯ)

**ಇವರಿಗೆ:**

1. ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
2. ಕುಲಪತಿಗಳು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ಮಹಾವಿದ್ಯಾಲಯ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು-41.

33



3. ಪ್ರಾಂಶುಪಾಲರು, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಪಿ. ಕಾಳಿಂಗರಾವ್ ರಸ್ತೆ, ಬೆಂಗಳೂರು-560027.
4. ಪ್ರಾಂಶುಪಾಲರು, ಕೆ.ಎಲ್.ಇ ಕಾಲೇಜ್ ಆಫ್ ಫಾರ್ಮಸಿ, ಅಕ್ಕೋಳ್ ರಸ್ತೆ, ನಿಪ್ಪಾಣಿ, ಬೆಳಗಾವಿ-591237.
5. ಶಾಖೆಯ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿಗಳು:-**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು-1.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಪತ್ರಾಂಕಿತ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಜಂಟಿ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕ.

KLE Society's
College of Pharmacy Nipani
Inward No. 182/2022-23
Date. 17/02/2023

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೆ.ಎಲ್.ಇ. ಸೊಸೈಟೀಸ್ ಕಾಲೇಜ್ ಆಫ್ ಫಾರ್ಮಸಿ, ನಿಪ್ಪಾಣಿ ಇಲ್ಲಿಗೆ ಎಂ.ಫಾರ್ಮ (ಫಾರ್ಮಾಸ್ಯೂಟಿಕ್ಸ್) ಕೋರ್ಸ್‌ನ್ನು 2010–11 ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ: ರಿಜಿಸ್ಟ್ರಾರ್, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ:ಫಿಶಿಪಿ/ಪಿ.ಎಚ್–54/2010–11, ದಿನಾಂಕ:23–11–2010.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ, ರಿಜಿಸ್ಟ್ರಾರ್, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು ಇವರು ಕೆ.ಎಲ್.ಇ. ಸೊಸೈಟೀಸ್ ಕಾಲೇಜ್ ಆಫ್ ಫಾರ್ಮಸಿ, ನಿಪ್ಪಾಣಿ ಇಲ್ಲಿ ಎಂ.ಫಾರ್ಮ (ಫಾರ್ಮಾಸ್ಯೂಟಿಕ್ಸ್) ಕೋರ್ಸ್‌ನ್ನು 2010–11 ನೇ ಸಾಲಿನಿಂದ 18 ಸೀಟುಗಳ ಪ್ರವೇಶ ಮಿತಿಯೊಂದಿಗೆ ಕೆಲವೊಂದು ಷರತ್ತುಗಳಿಗೆ ಒಳಪಡಿಸಿ ಹೊಸದಾಗಿ ಪ್ರಾರಂಭಿಸಲು ಶೈಕ್ಷಣಿಕ ಪರಿಷತ್ ಹಾಗೂ ಸಿಂಡಿಕೇಟ್ ತೆಗೆದುಕೊಂಡ ನಿರ್ಣಯದ ಪ್ರತಿಗಳನ್ನು ಲಗತ್ತಿಸಿ ಕಳುಹಿಸುತ್ತಾ ಶಿಫಾರಸ್ಸು ಮಾಡಿದ್ದಾರೆ.

ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ಆಕುಕ 383 ಪಿಟಿಡಿ 2010,
ಬೆಂಗಳೂರು, ದಿನಾಂಕ:16–12–2010.

1994 ರ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮದ 45(5) ನೇ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕೆ.ಎಲ್.ಇ. ಸೊಸೈಟೀಸ್ ಕಾಲೇಜ್ ಆಫ್ ಫಾರ್ಮಸಿ, ನಿಪ್ಪಾಣಿ ಇಲ್ಲಿ ಎಂ.ಫಾರ್ಮ (ಫಾರ್ಮಾಸ್ಯೂಟಿಕ್ಸ್) ಕೋರ್ಸ್‌ನ್ನು 2010–11 ನೇ ಸಾಲಿನಿಂದ 18 (ಹದಿನೆಂಟು) ಸೀಟುಗಳ ಪ್ರವೇಶ ಮಿತಿಯೊಂದಿಗೆ ಹೊಸದಾಗಿ ಪ್ರಾರಂಭಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮತಿ ನೀಡಲಾಗಿದೆ.

1) ಸಂಯೋಜನೆಯ ಬಗ್ಗೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ ಅನುಮತಿ ಪಡೆಯತಕ್ಕದ್ದು.
2) ಸಂಯೋಜನೆಯ ಬಗ್ಗೆ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅನುಮತಿ ಪಡೆಯತಕ್ಕದ್ದು.
3) ಸರ್ಕಾರದ ಸೀಟುಗಳ ಹಂಚಿಕೆಯಲ್ಲಿ ಪ್ರವೇಶಾವಕಾಶಕ್ಕೆ ಹಾಲಿ ಜಾರಿಯಲ್ಲಿರುವ ನಿಯಮಗಳಿಗೆ ಸಂಸ್ಥೆಯು ಬದ್ಧವಾಗಿರಬೇಕು.
4) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ / ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾ ನಿಗದಿಪಡಿಸಿರುವ ಪರಿನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
5) ರಾಜ್ಯ ಸರ್ಕಾರವು ಕಾಲ–ಕಾಲಕ್ಕೆ ನೀಡುವ ಸೂಚನೆ ಹಾಗೂ ಆದೇಶಗಳನ್ನು ಪಾಲಿಸತಕ್ಕದ್ದು.

...2

6) ಈ ಕಾಲೇಜುಗಳಿಗೆ ಕರ್ನಾಟಕ ಸರ್ಕಾರದ ವತಿಯಿಂದ ಯಾವುದೇ ರೀತಿಯ ಅನುದಾನ, ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದಿಲ್ಲ. ಇದು ಶಾಶ್ವತ ಅನುದಾನ ರಹಿತ ಷರತ್ತಿಗೆ ಒಳಪಟ್ಟಿರುತ್ತದೆ.

7) ಪ್ರಸ್ತಾಪಿತ ಸೀಟುಗಳಲ್ಲಿ ಶೇಕಡಾ 50 ರಷ್ಟು ಸೀಟುಗಳನ್ನು ಸರ್ಕಾರಿ ಸೀಟುಗಳಾಗಿ ಬಿಟ್ಟು ಕೊಡತಕ್ಕದ್ದು.

8) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ರವರ ನಾರ್ಮ್ಸ್ ಪ್ರಕಾರ ಅಗತ್ಯವಿರುವ ಅರ್ಹತೆ ಹೊಂದಿರುವ ಸ್ನಾತಕೋತ್ತರ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಳ್ಳತಕ್ಕದ್ದು.

9) ಮೇಲ್ಕಂಡ ಯಾವುದೇ ಒಂದು ಷರತ್ತನ್ನು ಉಲ್ಲಂಘಿಸಿದ್ದಲ್ಲಿ ಸಂಯೋಜನೆ / ಮಂಜೂರಾತಿಯನ್ನು ಹಿಂತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ. ಭೀಮಪ್ಪ)
ಸರ್ಕಾರದ ಉಪ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

ಇವರಿಗೆ:

1) ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು-41.
2) ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಆನಂದರಾವ್ ವೃತ್ತ, ಬೆಂಗಳೂರು-560 009.
3) ಪ್ರಾಂಶುಪಾಲರು, ಕೆ.ಎಲ್.ಇ. ಸೊಸೈಟೀಸ್ ಕಾಲೇಜ್ ಆಫ್ ಫಾರ್ಮಸಿ, ನಿಪ್ಪಾಣಿ-591 237.
4) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
5) ಸರ್ಕಾರದ ಕಾರ್ಯದರ್ಶಿಗಳು (ವೈದ್ಯಕೀಯ ಶಿಕ್ಷಣ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಯವರಿಗೆ.
6) ಸರ್ಕಾರದ ಉಪ ಕಾರ್ಯದರ್ಶಿಗಳು (ವೈದ್ಯಕೀಯ ಶಿಕ್ಷಣ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರಿಗೆ.
7) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

K. L. E. Society's
College of Pharmacy, Nipani
Inward No. 882
DEC 2010

## RULES OF GOVERNMENT OF KARNATAKA

SUB: - Regarding granting permission to the K.L.E College of Pharmacy at Nipani to Start M.Pharmacy (Pharmaceutics & Pharmacology) Course from the academic year.

Read: (1) Preamble order bearing no. ACAPH-54/2010-2011 of Rajiv Gandhi University of Health Sciences, Bengalore, Dated- 23/06/2009.

PREAMBLE:

With reference to the above cited subject Rajiv Gandhi University of Health Sciences 4 th 'T' Block Jayanagar, Bangalore has recommended K.L.E.College of Pharmacy, Nipani to Start M.Pharmacy (Pharmaceutics & Pharmacology) course with an intake limiting 06 (Six) seats each, from the academic year 2010-11.The documents of the above decision of the educational council & the syndicate are forwarded to the government for the further action.

Perused the Preamble & passed the order as under:

GOVT .ORDER NO. H & FW- 275/PTD-2009 BANGALORE DTD.14/10/2009.

On the basis of Preamble order as described, as per the 1994, Rajiv Gandhi University of Health Sciences under rule 45(5)has ordered K.L.E.College of Pharmacy, Nipani to Start M.Pharmacy (Pharmaceutics & Pharmacology) course with an intake limiting 06 (Six) seats each, from the academic year 2010-11 on the following terms & conditions.

1) To obtain permission from the All India Council for Technical Education regarding the management.
2) To obtain permission from the Rajiv Gandhi University of Health Sciences.
3) The institution has to follow the recent rules of the government regarding the seat sharing in the admission.
4) The terms & conditions laid by Rajiv Gandhi University of Health Sciences & All India Council for Technical Education should strictly & compulsorily be followed.
5) The directions & orders of the state government are also to be compulsorily followed.
6) The government of Karnataka will not give any kind of grant or financial assistance to these colleges. They are governed purely under unaided rules.
7) As per the granted seats 50% are reserved for the government.
8) If any of the above rules of the government are violated the grant / permission will be taken back.

As per the order of Governor
of Karnataka & in their name
sd/-
N.Mahalakshmamma
Under Secretary to the Government
Health & Family Welfare Department
(Indian Medical System)

NOTARY KARNATAKA

(2)

Copy to:

1) Vice-Chancellor, Rajiv Gandhi University of Health Sciences 4 th 'T' Block Jayanagar, Bangalore – 41.
2) Director of Medical Education, Anandrao Circle, Bangalore-560,009.
3) Principal, K.L.E.College of Pharmacy, Nipani.
4) Hon'ble Secretary to Minister of Medical Education, Legislative Assemly, Bangalore-01.
5) Chief Secretary to the government (Medical Education), Secretary to Health & Family Welfare Department.
6) Higher Secretary to Government (Medical Education) Personnel Assistants to Health & Family Welfare Department.
7) Defence Branch (Disposal) : Additional copies.

M.S.P

// TRUE TRANSALTION KANNADA TO ENGLISH BY //

Margret. S.P
ADVOCATE, NIPANI

True translation Kannada into English is verified. Same is true & correct.

29/X/09

NOTARY
P. A. TARALE
CIRCLE
GOVT. OF KARNATAKA

**P. A. TARALE** B.A. (Hons.) LL.B.(Spl.)
ADVOCATE & NOTARY
3635/1, SHIVAJI NAGAR
NIPANI Dist Belgaum

29 OCT 2009

Reg. Sl. No. 3023/09

Note : Notary Stamps not available in Karnatak hence notary stamps not affixed

B.Pharm. 40 → 60

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯಃ ಕೆ.ಎಲ್.ಇ. ಕಾಲೇಜ್ ಆಫ್ ಫಾರ್ಮಸಿ, ನಿಪ್ಪಾಣಿ, ಇಲ್ಲಿ ಬಿ–ಫಾರ್ಮ ಕೋರ್ಸಿನ ಪ್ರವೇಶ ಮಿತಿ ಹೆಚ್ಚಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆಃ 1) ರಿಜಿಸ್ಟ್ರಾರ್, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆಃ ಎಸಿಎ ಃಎಫ್:ಪಿಹೆಚ್– 54/O-10/2005-2006, ದಿನಾಂಕಃ 14.06.2005.

ಪ್ರಸ್ತಾವನೆಃ

ರಿಜಿಸ್ಟ್ರಾರ್, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4 ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮ ಸಂಖ್ಯೆಃ (1) ರಲ್ಲಿನ ಪತ್ರದಲ್ಲಿ ಕೆ.ಎಲ್.ಇ. ಕಾಲೇಜ್ ಆಫ್ ಫಾರ್ಮಸಿ, ನಿಪ್ಪಾಣಿ, ಇಲ್ಲಿ ಬಿ–ಫಾರ್ಮ ಕೋರ್ಸಿನ ಪ್ರವೇಶ ಮಿತಿ ಹೆಚ್ಚಿಸುವ ಕುರಿತು ಸ್ಥಳೀಯ ವಿಚಾರಣಾ ಸಮಿತಿ, ಶೈಕ್ಷಣಿಕ ಪರಿಷತ್ ಹಾಗೂ ಸಿಂಡಿಕೇಟ್ ತೆಗೆದುಕೊಂಡ ನಿರ್ಣಯದ ಪ್ರತಿಗಳನ್ನು ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆಃಆಕುಕ 338 ಪಿಟಿಡಿ 2005, ಬೆಂಗಳೂರು, ದಿನಾಂಕಃ 07.09.2006.**

1994ರ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮದ 45(5) ನೇ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕೆ.ಎಲ್.ಇ. ಕಾಲೇಜ್ ಆಫ್ ಫಾರ್ಮಸಿ, ನಿಪ್ಪಾಣಿ, ಇಲ್ಲಿ 2005-2006 ನೇ ಶೈಕ್ಷಣಿಕ ಸಾಲಿನಿಂದ ಬಿ–ಫಾರ್ಮ ಕೋರ್ಸಿನ ಪ್ರವೇಶ ಮಿತಿಯನ್ನು 40 (ನಲವತ್ತು) ರಿಂದ 60 (ಅರವತ್ತು) ಕ್ಕೆ ಹೆಚ್ಚಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮತಿ ನೀಡಲಾಗಿದೆ ಹಾಗೂ ಸಂಯೋಜನೆ ನೀಡಲು ಶಿಫಾರಸ್ಸು ಮಾಡಲಾಗಿದೆ.

1) ಸಂಯೋಜನೆಯ ಬಗ್ಗೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ ಅನುಮತಿ ಪಡೆಯತಕ್ಕದ್ದು.
2) ಸಂಯೋಜನೆಯ ಬಗ್ಗೆ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅನುಮತಿ ಪಡೆಯತಕ್ಕದ್ದು.
3) ಸರ್ಕಾರದ ಸೀಟುಗಳ ಹಂಚಿಕೆಯಲ್ಲಿ ಪ್ರವೇಶಾವಕಾಶಕ್ಕೆ ಹಾಲಿ ಜಾರಿಯಲ್ಲಿರುವ ನಿಯಮಗಳಿಗೆ ಸಂಸ್ಥೆಯು ಬದ್ಧವಾಗಿರಬೇಕು.

4) ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಃ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ ನಿಗದಿಪಡಿಸಿರುವ ಪರಿನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

5) ರಾಜ್ಯ ಸರ್ಕಾರವು ಕಾಲಕಾಲಕ್ಕೆ ನೀಡುವ ಸೂಚನೆ ಹಾಗೂ ಆದೇಶಗಳನ್ನು ಪಾಲಿಸತಕ್ಕದ್ದು.

6) ಈ ಕಾಲೇಜುಗಳಿಗೆ ಕರ್ನಾಟಕ ಸರ್ಕಾರದ ವತಿಯಿಂದ ಯಾವುದೇ ರೀತಿಯ ಅನುದಾನ, ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದಿಲ್ಲ. ಇದು ಶಾಶ್ವತ ಅನುದಾನ ರಹಿತ ಷರತ್ತಿಗೆ ಒಳಪಟ್ಟಿರುತ್ತದೆ.

7) ಸರ್ಕಾರದ ಮೇಲ್ಕಂಡ ಯಾವುದೇ ಒಂದು ಷರತ್ತನ್ನು ಉಲ್ಲಂಘಿಸಿದ್ದಲ್ಲಿ, ಸಂಯೋಜನೆ/ಮಂಜೂರಾತಿಯನ್ನು ಹಿಂತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ಎನ್.ಕೃಷ್ಣಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

**ಇವರಿಗೆ:**

1) ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4 ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು– 41.

2) ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಆನಂದರಾವ್ ವೃತ್ತ, ಬೆಂಗಳೂರು– 560 009.

3) ಪ್ರಾಂಶುಪಾಲರು, ಕೆ.ಎಲ್.ಇ. ಕಾಲೇಜ್ ಆಫ್ ಫಾರ್ಮಸಿ, ಅಂಚೆ ಪೆಟ್ಟಿಗೆ ಸಂಖ್ಯೆ 54, ಜಿ.ಐ.ಬಾಗೇವಾಡಿ ಕಾಲೇಜ್ ಕ್ಯಾಂಪಸ್, ನಿಪ್ಪಾಣಿ–591237.

4) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ವೈದ್ಯಕೀಯ ಶಿಕ್ಷಣ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

5) ಸರ್ಕಾರದಜಂಟಿಕಾರ್ಯದರ್ಶಿಯವರ ಆಪ್ತ ಸಹಾಯಕರು (ವೈದ್ಯಕೀಯ ಶಿಕ್ಷಣ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

6) ಶಾಖೆಯ ರಕ್ಷಾ ಕಡತ ಃ ಹೆಚ್ಚುವರಿ ಪ್ರತಿಗಳು.

K.L.E. Society's
College of Pharmacy, Nipani.
Inwards No 484/74
Date . 14/9/06

## RULES OF GOVERNMENT OF KARNATAKA

**SUB** :- Regarding granting permission to the K.L.E. Society's College of Pharmacy, Nipani, to Start B-Pharmacy Course from the academic year 2002-2003 onwards with an intake of 40 students.

**Read** : Preamble order bearing No.ACA:PH-1/2002-2003 of Rajiv Gandhi University of Health Sciences dated 12.4.2002.

**PREAMBLE** :

With reference to the above cited subject the Rajiv Gandhi University of Health Sciences has recommended for granting permissionto the K.L.E.Society's College of Pharmacy, Nipani to Start B-Pharmacy Course from the academic year 2002-2003 onwards with an intake of 40 students by imposing certain conditions .

Perused the Preamble order :

**GOVT. ORDER No.H & FW/81/PTD-2002 Bangalore dt. 29.8.2002.**

On the basis of Preamble order as described above, the K.L.E.Society's College of Pharmacy, Nipani has been permitted to Start B.Pharmacy Course from the academic year 2002-2003 onwards with an intake of 40 students on the following terms and conditions.

1) To appoint M-Pharm (Ist Class) Five Lecturers.
2) To obtain the Approval of All India Council of Technical Education and Pharmacy Council of India.
3) To provide seperate building for the B-Pharmacy Course as per the directions of All India Council of Technical Education.

As per the order of Governer of Karnatka & in their name.

Sd/-
( Nanjud)
Under Secretary to the Government
Health & family welfare Department.

NOTARY GOVT. OF KARNATAKA

No. of Corrections (4) four only.

.....2.

COPY TO :

1. Vice-Chancellor, Rajiv Gandhi Unversity of Health Sciences, 4th 'T' Block, Jayanagar, Bangalore-560 041.

2. Director of Medicatl Education, Bangalore-560 009.

3. Principal, K.L.E.Society's College of Pharmacy, G.I.Bagwadi College Campus, Nipani-591237.

4. Ministry of Cabinate Branch.

4. Defence Branch ( Disposal). : Additional copies.

//TRUE TRANSLATION KANNADA TO ENGLISH BY //

Palkar

(SHRI.P.L.PALKAR)
ADVOCATE, NIPANI.

True-Translation from kannad in to English carried by Shri P.L. Palkar Adv. Nipani certified as True & correct copy.

22/X/02

NOTARY

NOTARIAL RUPEES FIVE

NOTARIAL RUPEES FIVE

B.A.(Hons.) LL.B.(Sp)
ADVOCATE & NOTARY
SHIVAJI NAGAR
NIPANI Dist. Belgaum
22 OCT 2002
Regd. at Sl. No. 616/02